iv) ವಿಷಯ: ಹೈದ್ರಾಬಾದ್–ಕರ್ನಾಟಕ ಪ್ರದೇಶದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ರೈತರಿಗೆ ಸರಿಯಾದ ಕೂಲಿಯನ್ನು ನೀಡುತ್ತಿಲ್ಲದಿರುವ ಬಗ್ಗೆ

ಶ್ರೀ ಗುರು ಪಾಟೀಲ್ ಶಿರವಾಳ (ಶಹಾಪುರ):– ಮಾನ್ಯ ಅಧ್ಯಕ್ಷರೆ ಹೈದ್ರಾಬಾದ್–ಕರ್ನಾಟಕ ಪ್ರದೇಶದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ರೈತರಿಗೆ ಸರಿಯಾದ ಕೂಲಿಯನ್ನು ನೀಡುತ್ತಿಲ್ಲದಿರುವ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆಯನ್ನು ಪಡೆದು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಹೈದ್ರಾಬಾದ್–ಕರ್ನಾಟಕ ಪ್ರದೇಶದಲ್ಲಿ ಸಾಕಷ್ಟು ಚುನಾಯಿತ ಪ್ರತಿನಿಧಿಗಳು, ಸಂಘ–ಸಂಸ್ಥೆಗಳು, ಕೂಲಿಕಾರರು ಹಾಗೂ ಪಾವತಿದಾರರು ಕಾಮಗಾರಿಗಳ ಅನುಷ್ಠಾನದಲ್ಲಿ ಕೆಲಸ ನಿರ್ವಹಿಸಿದ ಕೂಲಿಕಾರರಿಗೆ ಕೂಲಿಯನ್ನು ಸರಿಯಾಗಿ ಪಾವತಿಸುತ್ತಿಲ್ಲವೆಂದು ಸರ್ಕಾರಕ್ಕೆ ವರದಿ ಮಾಡಿರುವ ಹಿನ್ನೆಲೆಯಲ್ಲಿ ರಾಜ್ಯದ ವತಿಯಿಂದ ತನಿಖಾ ತಂಡವನ್ನು ರಾಜ್ಯ ಗುಣಮಟ್ಟ ಮಾನೀಟರ್‌ಗಳು ಮತ್ತು ಜಿಲ್ಲಾ ಗುಣಮಟ್ಟ ಮಾನೀಟರ್‌ಗಳನ್ನು ಹೈದ್ರಾಬಾದ್–ಕರ್ನಾಟಕ ಪ್ರದೇಶದ ಜಿಲ್ಲೆಗಳಿಗೆ ನಿಯೋಜಿಸಲಾಗಿದೆ. ಅಲ್ಲದೇ ಇದರ ಸಂಬಂಧ ಸಾಮಾಜಿಕ ಪರಿಶೋಧನೆಯನ್ನೂ ಸಹ ನಡೆಸಲಾಗುತ್ತಿದೆ ಹಾಗೂ ಇದರ ಬಗ್ಗೆ ಬಂದಿರುವ ದೂರುಗಳನ್ನು ಓಂಬಡ್ಸ್‌ಮನ್‌ಗಳಿಂದ ಪರಿಶೀಲನೆ ಮಾಡಿಸಲಾಗುತ್ತಿದೆ. ಸದರಿಯವರ ವರದಿಗಳ ಆಧಾರದ ಮೇಲೆ ನೈಜ ಕೂಲಿ ಕಾರ್ಮಿಕರಿಗೆ ಕೂಲಿಯನ್ನು ಪಾವತಿಸಲಾಗಿರುತ್ತದೆ. 2012–13 ಮತ್ತು 2013–14ನೇ ಸಾಲುಗಳಲ್ಲಿ ಬಾಕಿ ಕೂಲಿ ಹಣದ ಪಾವತಿಗೆ ಲಭ್ಯವಿರುವ ವಿವರಗಳು ಈ ಕೆಳಗಿನಂತಿದೆ:

(ದಿನಾಂಕ: 22–02–2014ರಂದು ಇರುವಂತೆ) (₹ ಲಕ್ಷಗಳಲ್ಲಿ)

ಜಿಲ್ಲೆಯ ಹೆಸರು	2012–13				2013–14			
	ಬಿಡುಗಡೆ	ಮಾನವ ದಿನಗಳ ಉತ್ಪಾದನೆ (ಲಕ್ಷಗಳಲ್ಲಿ)	ಕೂಲಿ ಸಂದಾಯ	ಕೂಲಿ ಪಾವತಿಗೆ ಬಾಕಿ ಇರುವ ಹಣ	ಬಿಡುಗಡೆ	ಮಾನವ ದಿನಗಳ ಉತ್ಪಾದನೆ . (ಲಕ್ಷಗಳಲ್ಲಿ)	ಕೂಲಿ ಸಂದಾಯ	ಕೂಲಿ ಪಾವತಿಗೆ ಬಾಕಿ ಇರುವ ಹಣ
ಬೀದರ್	3168	14.89	2281.47	20.4	5398.25	12.24	3256.78	312.92
ಗುಲ್ಬರ್ಗಾ	6891	39.72	5154.43	234.95	13121.6	34.08	9123.40	972.01
ರಾಯಚೂರು	9398	43.33	6652.49	305.02	8422.6	24.21	6093.61	328.51
ಬಳ್ಳಾರಿ	2784	14.14	2009.44	3.03	3726.35	11.99	2510.09	83.51
ಕೊಪ್ಪಳ	3023	10.29	1704.45	4.47	4860.30	15.74	2965.16	301.53
ಯಾದಗಿರಿ	4527	24.99	1942.52	633.88	9031.95	29.17	6158.83	1728.76
ಒಟ್ಟು	**29791**	**147.36**	**19744.8**	**1201.75**	**44561.05**	**127.43**	**30107.87**	**3727.24**

ಕಳೆದ ವರ್ಷಕ್ಕೆ ಹೋಲಿಸಿದಾಗ ಈ ವರ್ಷದಲ್ಲಿ 82%ರಷ್ಟು ಹೆಚ್ಚು ಪ್ರಗತಿ ಸಾಧಿಸಲಾಗಿರುತ್ತದೆ. ಈ ವರ್ಷದಲ್ಲಿ ಹಣ ಪಾವತಿಸಲು ಹೆಚ್ಚಿನ ಹಣ ಬೇಕಾಗಿರುತ್ತದೆ. ಕೇಂದ್ರ ಸರ್ಕಾರದಿಂದ ಹಂತ ಹಂತವಾಗಿ ಬಿಡುಗಡೆ ಮಾಡಲಾಗುವ ಅನುದಾನದಿಂದ ಕೂಲಿಕಾರರಿಗೆ ಪಾವತಿಗೆ ಬಾಕಿ ಇರುವ ನೈಜ ಪ್ರಕರಣಗಳಲ್ಲಿನ ನೈಜ ಕೂಲಿ ಕಾರ್ಮಿಕರಿಗೆ ಕೂಲಿ ಹಣವನ್ನು ಪಾವತಿಸಲು ಕ್ರಮವಹಿಸಲಾಗುವುದು.

ಶ್ರೀ ಗುರು ಪಾಟೀಲ್ ಶಿರವಾಳ:– ಮಾನ್ಯ ಅಧ್ಯಕ್ಷರೆ, ನರೇಗಾದಲ್ಲಿ 100 ರಿಂದ 105 ದಿವಸಕ್ಕೆ ಕೂಲಿ ಕೊಡುವುದಕ್ಕೆ ನೀವು ಹೆಚ್ಚಳ ಮಾಡಿದ್ದೀರಿ. ಆದರೆ ಅಲ್ಲಿ ಪರಿಸ್ಥಿತಿ ಏನೆಂದರೆ ಸುಮಾರು ಹತ್ತು, ಹದಿನೈದು, ಇಪ್ಪತ್ತು ದಿವಸದ ಕೂಲಿ ಮಾತ್ರ ಕೂಲಿಕಾರ್ರರಿಗೆ ಸಿಗುತ್ತಿದೆ. ಅಲ್ಲಿ ಪೂರ್ಣ ಪ್ರಮಾಣದಲ್ಲಿ ಕೂಲಿ ಸಿಗುತ್ತಿಲ್ಲ. ಆದುದರಿಂದ ಪೂರ್ಣ ಪ್ರಮಾಣದಲ್ಲಿ ಆ ಜನರಿಗೆ ಕೂಲಿ ಸಿಗುವಂತಹ ಕೆಲಸವಾಗಬೇಕು.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಮಾನ್ಯ ಸದಸ್ಯರು ಕೇಳಿದಂತಹ ಪ್ರಶ್ನೆಗೆ ಸುದೀರ್ಘವಾದ ಉತ್ತರವನ್ನು ಕೊಟ್ಟಿದ್ದಾರೆ. ಅವರು ಎತ್ತಿರುವ ವಿಚಾರ ಕೂಲಿ ನೇರವಾಗಿ ವರ್ಗಾವಣೆ ಆಗುತ್ತಿಲ್ಲ, ಕಡಿಮೆಯಾಗುತ್ತಿದೆ ಎಂದು ಹೇಳುತ್ತಿದ್ದಾರೆ. ಇವತ್ತು ಅವರಿಗೆ online ನಲ್ಲಿ ವೇತನ ಬಿಡುಗಡೆ ಆಗುತ್ತಿರುವಂತಹ ಸಂದರ್ಭದಲ್ಲಿ ಕಡಿಮೆ ಆಗುವಂತಹ ಪ್ರಶ್ನೆ ಎಲ್ಲಿ ಬರುತ್ತದೆ?

ಶ್ರೀ ಗುರು ಪಾಟೀಲ್ ಶಿರವಾಳ:– 150 ದಿವಸಕ್ಕೆ ಕೆಲಸ ಕೊಡಬೇಕಲ್ಲವೇ? ಕೆಲಸ ಕೊಡುತ್ತಿಲ್ಲ, ಅದು ಆಗುತ್ತಿಲ್ಲ.

ಶ್ರೀ ಟಿ.ಬಿ. ಜಯಚಂದ್ರ:– ಆಯಿತು, ನಾವು ಅದರ ಕಡೆ ಗಮನವನ್ನು ಹರಿಸುತ್ತೇವೆ. ಏಕೆಂದರೆ drought ಎಂದು ಘೋಷಣೆ ಆದಾಗ ಮಾತ್ರ 150 ದಿವಸ ಕೊಡುವುದಕ್ಕೆ ಬರುತ್ತದೆ. ಅಲ್ಲಿ drought ಎಂದು ಘೋಷಣೆಯಾಗಿರತಕ್ಕಂತಹ ಹಿನ್ನೆಲೆಯಲ್ಲಿ, ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಒಂದು notification ಮತ್ತು ಸಂದೇಶ ಕೂಡ ಹೋಗಬೇಕಾಗಿದೆ. ಅದರ ಬಗ್ಗೆ ಗಮನ ಹರಿಸಿ, ಅಲ್ಲಿ 150 ದಿವಸ ಕೆಲಸವನ್ನು ಕೊಡುವಂತಹ ಕೆಲಸವನ್ನು ಮಾಡುತ್ತೇವೆ.

ಅಧ್ಯಕ್ಷರು:– ಈಗ ವಿ. ಸುನೀಲ್ ಕುಮಾರ್ ಕೇಳಿ